ಮಲಯಾಳಂ ಲೇಖಕಿ ಲಲಿತಾಂಬಿಕಾ ಅಂತರ್ಜನಂ ಹೇಳುವಂತೆ ಕಥಾಸೃಷ್ಟಿಯಲ್ಲಿ ಒಂದು ಬೀಜವಾಪ ಸಂಗತಿ ಇದ್ದು ಅದು ತನ್ನಿಂದ ತಾನೇ ಬೆಳೆಯುತ್ತದೆ ಎಂದು ಹೇಳಿರುತ್ತಾರೆ. ಒಬ್ಬ ಲೇಖಕನ ಕೃತಿಯಲ್ಲಿ ಕಲ್ಪನೆಯೊಂದಿಗೆ ಅಲ್ಲಲ್ಲಿ ಕಂಡು ಕೇಳಿದ, ಕಾಣದ ಸಂಗತಿಗಳೆಲ್ಲ ಸಮಯಕ್ಕೆ ತಕ್ಕಂತೆ ತಮ್ಮಪಾಡಿಗೆ ತಾವೇ ನಾಜೂಕಾಗಿ ಬಂದು ಸೇರಿ ಕೂತುಕೊಳ್ಳುತ್ತವೆ. ಹೀಗಾಗಿ ನಾನು ಗೊತ್ತಿರುವಷ್ಟನ್ನು ಬರೆಯುತ್ತೇನೆ ಎಂದಿದ್ದರೂ 'ಅಜ್ಞಾತನೊಬ್ಬನ ಆತ್ಮಚರಿತ್ರೆ'ಯ ಕಥನ ವಿವರಗಳೆಲ್ಲ ನನಗೆ ಗೊತ್ತಿರುವಂಥವೇ ಅಲ್ಲ. ಕಾದಂಬರಿಯ ಆರಂಭಕ್ಕೆ ಪ್ರಸ್ತಾಪವಾಗಿರುವ ಬಖೈರು ನಿಮಗೆ ಎಲ್ಲಿ ಸಿಕ್ಕಿತು ಎಂದು ಕೇಳಿದವರಿದ್ದಾರೆ. ಆಮೇಲೆ ಆ ಅಜ್ಞಾತ ಸಿಪಾಯಿ ಹಳ್ಳದಲ್ಲಿ ಬಿದ್ದು, ಕುದುರೆಯ ಸಹಾಯದಿಂದ ಹೋಗಿ ಸೇರಿದ್ದು ಯಾವ ಹಳ್ಳಿಗೆ, ಅಲ್ಲಿ ಆ ವೀರಗಲ್ಲು ಸಂತನ ಮಂಟಪ ಇದೆಯೇ ಎಂದವರುಂಟು. ನಾನು ನನ್ನ ಓಡಾಟಗಳಲ್ಲಿ ವೀರಗಲ್ಲು, ಸತಿಕಲ್ಲು, ಗುಡಿ, ಮಂಟಪ, ಬಖೈರುಗಳನ್ನು ನೋಡಿರುವುದು ನಿಜ. ಆದರೆ, ಆ ಅಜ್ಞಾತವೀರನ ದಾಖಲೆ, ವೀರಗಲ್ಲು, ಮಂಟಪ ಕಂಡದ್ದಿಲ್ಲ. ಚಿತ್ರದುರ್ಗದ ಕಡೆ ಹೈದರ್, ಟಿಪ್ಪು ನಡೆಸಿದ ಯುದ್ಧ ವಿವರಗಳನ್ನು ಹೆಚ್ಚು ಓದಿಯೇ ಇಲ್ಲ. ಯುದ್ಧ ದುರಂತಗಳನ್ನು ಕಂಡದ್ದಿಲ್ಲ. ಆದರೆ, ಕಾದಂಬರಿಯಲ್ಲಿ ಎಲ್ಲ ವಿವರಗಳು ನಿಜ ಎಂಬಂತೆಯೇ ಓದುಗರಿಗೆ ತೋರಿ ಬಂದಿರುವುದಾದರೆ, ನಾನು ಹಾಗೆ ಬರೆದಿರುವುದಾದರೆ ಅದೊಂದು ವಿಸ್ಮಯ ಎನಿಸುತ್ತದೆ. ಇದೇ ಕಥನ ಸೃಷ್ಟಿಯ ಬೀಜವಾಪ ಸಂಗತಿ ಇರಬಹುದು. ಅದು ಹೇಳದೇ ಕೇಳದೇ ತನ್ನಿಂದ ತಾನೇ ಸೃಷ್ಟಿಯಾಗುವಂಥದ್ದು. ವಿಮರ್ಶಕ ಗಿರಡ್ಡಿ ಗೋವಿಂದರಾಜ ಅವರು ತಮ್ಮ 'ಕಲ್ಪಿತ ವಾಸ್ತವ' ಲೇಖನದಲ್ಲಿ ಬರಹಗಾರನನ್ನು ಕುರಿತು ಈ ಕಥನ ಸಂಗತಿ ನಡೆದದ್ದು ನಿಜವೇ ಎಂದರೆ ಇಲ್ಲ ಎನ್ನುವಂತೆ! ಹಾಗೆ ಇಲ್ಲ ಎನ್ನಲು ಲೇಖಕನ ಮನಸ್ಸು ಒಪ್ಪುವುದಿಲ್ಲ ಎಂದಿದ್ದಾರೆ. ಕಥನ ಸೃಷ್ಟಿಯಲ್ಲಿ ನನಗೂ ಇದು ಸರಿ ಎಂದು ತೋರುತ್ತದೆ.

ಇದೀಗ ಕಥನ, ಕಾವ್ಯಪ್ರಕಾರದಲ್ಲಿ ಸರ್ವಶ್ರೇಷ್ಠ ಅಥವಾ ಪ್ರಯೋಗಾತ್ಮಕ ಇಲ್ಲವೇ ಮಾರ್ಗ ಪ್ರವೃತ್ತ ಕೃತಿಗಳು ಬರುತ್ತಿಲ್ಲ ಎನ್ನುವುದಾದರೆ ಅದು ಅಷ್ಟು ಸುಲಭವೂ, ಸರಳವೂ ಅಲ್ಲ ಎನಿಸುತ್ತದೆ. 'ಕಾನೂರು ಹೆಗ್ಗಡಿತಿ', 'ಮಲೆಗಳಲ್ಲಿ ಮದುಮಗಳು', 'ಗ್ರಾಮಾಯಣ'ದಂಥ ಸೃಜನಶೀಲ ಕೃತಿಗಳು ನಿರಂತರವಾಗಿ ಸೃಷ್ಟಿಯಾಗಲಾರವು. ಹಾಗೆ ನೋಡಿಕೊಂಡರೆ ತೇಜಸ್ವಿ ಅವರ 'ಕರ್ವಾಲೊ' ಕಾದಂಬರಿ, ಆಲನಹಳ್ಳಿ ಕೃಷ್ಣ ಅವರ 'ಕಾಡು' ಕಾದಂಬರಿ, 'ಕಾನೂರು ಹೆಗ್ಗಡಿತಿ', 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳ ಒಡಲಾಳದಿಂದಲೇ ಮೂಡಿಬಂದಿವೆ ಎನಿಸುತ್ತದೆ. ನಾಯಿಗುತ್ತಿ – ಮಂದಣ್ಣ, ಹುಲಿಯ – ಕಿವಿ, ಕರ್ವಾಲೊ – ಹೂವಯ್ಯ ಮತ್ತು ಪರಿಸರ ವಿವರಗಳಲ್ಲೆಲ್ಲ ಒಂದಕ್ಕೊಂದು ಹೊಂದಿಕೆ ಇರುವಂತೆ ತೋರುತ್ತದೆ. ಈ ಮಧ್ಯೆ ಕನ್ನಡ ಕಥನ ಪ್ರಕಾರ ಮಾತ್ರ ಈಗ ಸಶಕ್ತವಾಗಿಯೇ ಇದೆ ಎನಿಸುತ್ತದೆ. ವಿವೇಕ ಶಾನಭಾಗರ 'ಘಾಚರ್ ಘೋಚರ್', 'ಊರುಭಂಗ', ಮೊಗಳ್ಳಿ ಗಣೇಶ್ ಅವರ 'ಬುಗುರಿ', ಹನೂರು ಚನ್ನಪ್ಪನವರ 'ಅನ್ನ' ಸಂಕಲನ, ಟಿ.ಕೆ. ದಯಾನಂದ ಅವರ 'ನಾಯಿ ಬೇಟೆ' ಕಥೆ, ತೀರ ಈಚಿನ ಶಾಂತಿ ಅಪ್ಪಣ್ಣ ಅವರ ಕಥೆಗಳು ಒಳ್ಳೆಯ ಪ್ರಯೋಗಗಳು ಎನಿಸುತ್ತವೆ. ಇನ್ನು ಮುಂದೆ ನಾನಾದರೋ ಬುಡಕಟ್ಟು ಹುಡುಗನೊಬ್ಬ ವಿದ್ಯಾಭ್ಯಾಸಕ್ಕಾಗಿ ವಿಶ್ವವಿದ್ಯಾಲಯ ಪ್ರವೇಶಿಸುವ ಸಂಗತಿ ಕುರಿತು ಬರೆಯಬೇಕೆನಿಸಿರುವ ಕಾದಂಬರಿಯಲ್ಲಿ ಹೇಳದೇ ಉಳಿದ ಅನುಭವಗಳನ್ನೆಲ್ಲ ಕಾಣಿಸಬೇಕು ಎಂದುಕೊಂಡಿದ್ದೇನೆ.